# ಆಹಾ ಸುದ್ದಿ!

★ ಸಸಿತೋಟ

ಅಮೆರಿಕ, ಇಂಗ್ಲೆಂಡ್‌ಗಳಲ್ಲಿ 'ಫೆರೊಮೋನ್' ಔತಣಕೂಟಗಳು ಭಾರಿ ಜನಪ್ರಿಯತೆ ಗಳಿಸುತ್ತಿವೆಯಂತೆ. ಔತಣಕೂಟಕ್ಕೆ ತೆರಳುವ 3 ದಿನಗಳ ಮುಂಚಿನಿಂದಲೇ ಒಂದೇ ಟಿ ಷರ್ಟ್ ಧರಿಸಿ ಅದನ್ನು ಪ್ಯಾಕ್ ಮಾಡಿಕೊಂಡು ಹೋಗಬೇಕಂತೆ. ಅಲ್ಲಿ ಅದನ್ನು ಮೂಸಿದ ಗಂಡು–ಹೆಣ್ಣುಗಳು ತಮ್ಮ ಜೊತೆಗಾರರನ್ನು ಆಯ್ಕೆ ಮಾಡಿಕೊಳ್ಳುತ್ತಾರಂತೆ. ಮುಖ ನೋಡುವ ಕಾಲ ಹೋಯ್ತು, ಮೂಸುವ ಕಾಲ ಬಂತು..



ಆಸ್ಟ್ರೇಲಿಯಾದಲ್ಲಿ ಇತ್ತೀಚೆಗೆ ನಡೆದ ಹಾಫ್ ಮ್ಯಾರಥಾನ್‌ನಲ್ಲಿ ಸ್ಪರ್ಧಿಗಳು ಓಡಿಯೇ ಓಡಿದರು. ಆದರೆ ಕೊನೆಗೆ ಪ್ರಥಮ ಸ್ಥಾನ ಗಳಿಸಿ ಪದಕ ಪಡೆದದ್ದು ಮಾತ್ರ ಸ್ವಾರ್ಮಿ ಎಂಬ ಬೀದಿ ನಾಯಿ. 21 ಕಿ.ಮೀ. ದೂರವನ್ನು ಎರಡೂವರೆ ತಾಸಿನಲ್ಲಿ ಓಡಿದ ಸ್ವಾರ್ಮಿಗೆ ಪಾಪ ಪಡೆದ ಪದಕಕ್ಕೆ ಮುತ್ತಿಕ್ಕಲೂ ಸಾಧ್ಯವಾಗಲಿಲ್ಲ ಎಂದು ನೆರೆದವರು ಲೊಚಗುಟ್ಟಿದರಂತೆ.



ಚೀನಾದ ಕಂಪೆನಿಯೊಂದರ ಉದ್ಯೋಗಿಗಳು ಸ್ವಚ್ಛತೆಯನ್ನು ಯಾರೂ ಊಹಿಸದ ಮಟ್ಟಕ್ಕೆ ಒಯ್ದಿದ್ದಾರೆ. ಕಚೇರಿಯ ಶೌಚಾಲಯವನ್ನು ಎಷ್ಟು ಸ್ವಚ್ಛವಾಗಿಟ್ಟುಕೊಂಡಿದ್ದೇವೆ ಎಂಬುದನ್ನು ತೋರಿಸಲು ಅದರಲ್ಲೇ ಆಹಾರವನ್ನು ಬಡಿಸಿಕೊಂಡು ತಿಂದರಂತೆ. ಈ ವಿಷಯದಲ್ಲಿ ಕೂಡ ಭಾರತವು ಚೀನಾಗೆ ಸ್ಪರ್ಧೆ ನೀಡಲು ಸಾಧ್ಯವಿಲ್ಲ.



ಅಪಾಯಕಾರಿ ಕಿಕಿ ಡಾನ್ಸ್ ಸವಾಲಿನ ಬೆನ್ನಲ್ಲೇ ಈಗ ಇನ್ನೂ ಅಪಾಯಕಾರಿ ಎನಿಸಿರುವ 'ಡ್ರಾಗನ್ಸ್ ಬ್ರೆಥ್' ಎಂಬ ದ್ರವರೂಪದ ಸಾರಜನಕದಲ್ಲಿ ಅದ್ದಿದ ಸಿಹಿ ಕ್ಯಾಂಡಿ ತಿನ್ನುವ ಟ್ರೆಂಡ್ ಶುರುವಾಗಿದೆಯಂತೆ. ಅದನ್ನು ತಿನ್ನುವಾಗ ಹೊಗೆ ಎದ್ದು ಡ್ರಾಗನ್ ಹೊಗೆ ಉಗುಳಿದಂತೆ ಕಾಣುತ್ತದೆ. ಇದರಿಂದ ಬಾಯಿ, ದೇಹದೊಳಗಿನ ಇತರ ಅಂಗಾಂಗಗಳು ಕರಗುವ ಅಪಾಯ ಜಾಸ್ತಿಯಂತೆ. ಜನರ ಮಜಾ ಎನ್ನುವುದು ಪೊಲೀಸರಿಗೆ ರಜಾ ಹಾಕಿ ಸುಧಾರಿಸಿಕೊಳ್ಳಲೂ ಪುರುಸೊತ್ತು ನೀಡುತ್ತಿಲ್ಲ..

ಹಾವು ಕಡಿದರೆ ಆ ಹಾವನ್ನು ಕೊಂದು ಹಾಕುವ ಅಥವಾ ಯಾರಾದರೂ ಅದನ್ನು ಹಿಡಿದು ಬೇರೆ ಕಡೆ ಸಾಗ ಹಾಕುವ ಕೆಲಸ ಮಾಡುತ್ತಾರೆ. ಆದರೆ ಚೀನಾದ ಈ ಮಹಿಳೆ ತನಗೆ ಕಡಿದ ಹಾವನ್ನು ಕೈಗೆ ಸುತ್ತಿಕೊಂಡೇ ಆಸ್ಪತ್ರೆಗೆ ಧಾವಿಸಿದಳಂತೆ. ಸದ್ಯ ಮೊದಲು ಹಾವಿಗೆ ಇಲಾಜು ಮಾಡಿಸಲು ಪಶು ಆಸ್ಪತ್ರೆಗೆ ಧಾವಿಸಲಿಲ್ಲ ಎಂದು ಆಸ್ಪತ್ರೆ ಸಿಬ್ಬಂದಿ ನಿಟ್ಟುಸಿರು ಬಿಟ್ಟರಂತೆ.



ಇಂಗ್ಲೆಂಡಿನಲ್ಲಿ ಟೋನಿ ಎಂಬಾತನ ನಾಯಿ ಮ್ಯಾನ್‌ಹೋಲ್‌ಗೆ ಬಿತ್ತು. ಅದನ್ನು ಹಿಡಿದುಕೊಳ್ಳಲು ಆತನೂ ಜಿಗಿದು 20 ಅಡಿ ಕೆಳಕ್ಕೆ ಬಿದ್ದು ಕಾಲು ಮುರಿದುಕೊಂಡನಂತೆ. ನಾಯಿ ಆರಾಮವಾಗಿ ಮೇಲಕ್ಕೆ ಹತ್ತಿಕೊಂಡು ಬಂದರೆ ನಾಯಿಯ ಮಾಲೀಕನನ್ನು ರಕ್ಷಿಸಲು ಪೊಲೀಸರು, ಅಗ್ನಿಶಾಮಕ ದಳದವರು, ಅರೆವೈದ್ಯಕೀಯ ತಂಡದವರು, 14 ತುರ್ತು ವಾಹನಗಳು.. ಎಂದೆಲ್ಲ ಎರಡು ಗಂಟೆಗಳ ಕಾಲ ಹೆಣಗಿದರಂತೆ. ನಾಯಿ ಪಾಡು ನಮ್ಮದು ಎಂದು ಹೇಳಿಕೊಳ್ಳುವ ಹಾಗೂ ಇಲ್ಲ ಎಂದು ರಕ್ಷಣೆಗೆ ನಿಂತವರು ಗೊಣಗಿಕೊಂಡಿರಬಹುದು.